ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
KARNATAKA STATE TOURISM DEVELOPMENT CORPORATION LTD.
(ಕರ್ನಾಟಕ ಸರ್ಕಾರದ ಒಂದು ಉದ್ಯಮ) (A Govt. of Karnataka Undertaking)

ಕಛೇರಿ : ನೆಲಮಹಡಿ, ಬಿ.ಎಂ.ಟಿ.ಸಿ. ಯಶವಂತಪುರ
ಟಿ.ಟಿ.ಎಂ.ಸಿ. - ಬಸ್ ನಿಲ್ದಾಣ, ಯಶವಂತಪುರ ವೃತ್ತ
ಬೆಂಗಳೂರು - 560 022.

Office : Ground Floor, B.M.T.C.
Yeshwanthpur, T.T.M.C Bus Stand
Yeshwanthpur Circle, Bangalore-560 022

ಕರಾಪ್ರುಅನಿ/ಆಡಳಿತ/ವ್ಯ/2022-23 | 574

ದಿನಾಂಕ:18.06.2024
19

## ಅಧಿಕೃತ ಜ್ಞಾಪನ ಪತ್ರ

ವಿಷಯ: ಶ್ರೀ ರಾಮಚಂದ್ರ.ಕೆ, ದ್ವಿತೀಯ ದರ್ಜೆ ಸಹಾಯಕ (ಗುತ್ತಿಗೆ), ಇವರ ಗುತ್ತಿಗೆ ಸೇವೆಯಿಂದ ವಜಾಗೊಳಿಸುವ ಕುರಿತು.

ಉಲ್ಲೇಖ: 1. ಪತ್ರದ ಸಂಖ್ಯೆ: ಕರಾಪ್ರುಅನಿ/ಆಡಳಿತ/42/2022-23/82/2024 ದಿನಾಂಕ:18.04.2024
2. ತಮ್ಮ ಪತ್ರದ ದಿನಾಂಕ: 20.04.2024

*****

**ಪ್ರಸ್ತಾವನೆ:**

ಶ್ರೀ ರಾಮಚಂದ್ರ.ಕೆ, ದ್ವಿತೀಯ ದರ್ಜೆ ಸಹಾಯಕ (ಗುತ್ತಿಗೆ), ಮಯೂರ ಬಾಲ ಭವನ ಕಿಯೋಸ್ಕ್ ಆದ ನಿಮ್ಮನ್ನು ಉಲ್ಲೇಖ(1) ರ ಆದೇಶದಂತೆ "ದ್ವಿತೀಯ ದರ್ಜೆ ಸಹಾಯಕ" (ಗುತ್ತಿಗೆ) ಹುದ್ದೆಗೆ ದಿನಾಂಕ:02.04.2024 ರಿಂದ ಅನ್ವಯವಾಗುವಂತೆ ಒಂದು ವರ್ಷದ ಅವಧಿಗೆ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುತ್ತದೆ. ಸದರಿ ಷರತ್ತು ಮತ್ತು ನಿಯಮಾವಳಿಗೆ ಬದ್ಧರಾಗಿ, ನೀವು ನಿಗಮದಲ್ಲಿ ಒಪ್ಪಂದ ಮಾಡಿಕೊಂಡಿರುತ್ತೀರಿ.

ಆದರೆ ತಾವು, ಮಯೂರ ಬಾಲ ಭವನ ಕಿಯೋಸ್ಕ್ ನಲ್ಲಿ ನಿಗಮದ ಕ್ಯೂ ಆರ್ ಕೊಡ್ ಅನ್ನು ಬಳಸದೆ ತಮ್ಮ ವೈಯಕ್ತಿಕ ಕ್ಯೂ ಆರ್ ಕೊಡ್ ಬಳಸಿ ತಮ್ಮ ವೈಯಕ್ತಿಕ ಖಾತೆಗೆ ರೂ. 31,917/- ಗಳನ್ನು UPI ಮುಖಾಂತರ ಪಡೆದಿರುವುದು ತಾವು ಸಲ್ಲಿಸಿರುವ ತಮ್ಮ ಬ್ಯಾಂಕ್ ಖಾತೆಯ statement ನಿಂದ ಹಾಗೂ ತಾವು ಹಣ ದುರುಪಯೋಗ ಮಾಡಿಕೊಂಡಿರುವುದಾಗಿ ಒಪ್ಪಿಕೊಂಡಿರುವ ಉಲ್ಲೇಖ (2) ರ ಪತ್ರದಿಂದ ಕಂಡುಬಂದಿರುತ್ತದೆ. ಇದು ನಿಗಮದ ಗುತ್ತಿಗೆ ನೇಮಕಾತಿ ಷರತ್ತು ಮತ್ತು ನಿಯಮಗಳ ಕ್ರ.ಸಂ 16 ರ ವಿರುದ್ಧವಾಗಿದ್ದು, ಇದರನ್ವಯ ನಿಗಮಕ್ಕೆ ನಿಮ್ಮ ಸೇವೆಯ ಅವಶ್ಯಕತೆ ಇಲ್ಲವೆಂದು ಪರಿಗಣಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ**

ಮೇಲ್ಕಂಡ ಪ್ರಸ್ತಾವನೆಯನುಸಾರ, ಶ್ರೀ ರಾಮಚಂದ್ರ.ಕೆ, ದ್ವಿತೀಯ ದರ್ಜೆ ಸಹಾಯಕ ( ಗುತ್ತಿಗೆ), ಮಯೂರ ಬಾಲ ಭವನ ಕಿಯೋಸ್ಕ ತಮ್ಮೊಂದಿಗೆ ಮಾಡಿಕೊಂಡ ಕರಾರು ಒಪ್ಪಂದವನ್ನು ಉಲ್ಲೇಖಿತ ಆದೇಶದ ಕ್ರಮ ಸಂಖ್ಯೆ: ನಿಯಮ 16 ರ ಷರತ್ತಿನನ್ವಯ ತಮ್ಮ ಕರಾರು ಒಪ್ಪಂದವನ್ನು ರದ್ದುಗೊಳಿಸಿ , ತಮ್ಮನ್ನು ಗುತ್ತಿಗೆ ಸೇವೆಯಿಂದ ಈ ಕೂಡಲೇ ವಜಾಗೊಳಿಸಲಾಗಿದೆ .

ವ್ಯವಸ್ಥಾಪಕ ನಿರ್ದೇಶಕರು

ಗೆ,
ರಾಮಚಂದ್ರ.ಕೆ,
ದ್ವಿತೀಯ ದರ್ಜೆ ಸಹಾಯಕ,
ಮಯೂರ ಬಾಲ ಭವನ ಕಿಯೋಸ್ಕ
ಬೆಂಗಳೂರು

ಪ್ರತಿ: 1.ವ್ಯ.ನಿ.ಆ.ಸ 2. ಪ್ರ.ವ್ಯ.(ಹ) 3.ಪ್ರ.ವ್ಯ(ಸಾ) 4. ಕಛೇರಿ ಪ್ರತಿ

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
KARNATAKA STATE TOURISM DEVELOPMENT CORPORATION LTD.
(ಕರ್ನಾಟಕ ಸರ್ಕಾರದ ಒಂದು ಉದ್ಯಮ) (A Govt. of Karnataka Undertaking)

ಕಛೇರಿ : ನೆಲಮಹಡಿ, ಬಿ.ಎಂ.ಟಿ.ಸಿ. ಯಶವಂತಪುರ
ಟಿ.ಟಿ.ಎಂ.ಸಿ. - ಬಸ್ ನಿಲ್ದಾಣ, ಯಶವಂತಪುರ ವೃತ್ತ
ಬೆಂಗಳೂರು - 560 022.

Office : Ground Floor, B.M.T.C.
Yeshwanthpur, T.T.M.C Bus Stand
Yeshwanthpur Circle, Bangalore-560 022

ಸಂಖ್ಯೆ: ಕರಾಪ್ರಅನಿ/ಆಡಳಿತ/87/2024-25/570 ದಿನಾಂಕ: 18.06.2024

## ಕಛೇರಿ ಆದೇಶ

ವಿಷಯ: ಮಯೂರ ಬಾಲ ಭವನ ಕಿಯೋಸ್ಕ ಘಟಕದಲ್ಲಿ ನಡೆದಿರುವ ಆರ್ಥಿಕ ಅವ್ಯವಹಾರಕ್ಕೆ ಸಂಬಂಧಿಸಿದಂತೆ FIR ದಾಖಲಿಸುವ ಕುರಿತು

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ನಾಗಭೂಷಣ್, (ಹೊರಗುತ್ತಿಗೆ) ಪ್ರಭಾರ ವ್ಯವಸ್ಥಾಪಕರು, ಮಯೂರ ಬಾಲ ಭವನ ಕಿಯೋಸ್ಕ ತಮ್ಮ ಘಟಕದಲ್ಲಿ 04 ಜನ ಸಿಬ್ಬಂದಿಗಳು ನಿಗಮದ ಹಣದ ವ್ಯವಹಾರವನ್ನು ನಿಗಮದ QR ಕೋಡ್ ನ್ನು ಬಳಸದೆ ಅವರ ವೈಯಕ್ತಿಕ QR ಕೋಡ್ ನ್ನು ಬಳಸಿ UPI ಮೂಲಕ ಹಣ ದುರುಪಯೋಗ ಮಾಡಿಕೊಂಡಿರುವುದು ಅವರು ಸಲ್ಲಿಸಿದ ಅವರ ವೈಯಕ್ತಿಕ ಬ್ಯಾಂಕ್ ಖಾತೆಯ ಪರಿಶೀಲನೆಯಿಂದ ಧೃಡಪಟ್ಟಿರುತ್ತದೆ. ಆದ್ದರಿಂದ, ಸದರಿ ಸಿಬ್ಬಂದಿಗಳ ಮೇಲೆ ಕ್ರಿಮಿನಲ್ ಕೇಸ್ (FIR) ನ್ನು ಈ ಕೂಡಲೇ ದಾಖಲಿಸುವಂತೆ ಆದೇಶಿಸಲಾಗಿದೆ.

ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**
ಶ್ರೀ ನಾಗಭೂಷಣ್,(ಹೊರಗುತ್ತಿಗೆ)
ಮಯೂರ ಬಾಲ ಭವನ ಕಿಯೋಸ್ಕ
ಬೆಂಗಳೂರು

ಪ್ರತಿ: 1.ವ್ಯ.ನಿ.ಆ.ಸ 2. ಪ್ರ.ವ್ಯ.(ಹ) 3.ಪ್ರ.ವ್ಯ(ಸಾ) 4. ಕಛೇರಿ ಪ್ರತಿ

ದೂರವಾಣಿ Phone : 080-43344334 ◆ ಫ್ಯಾಕ್ಸ್ Fax : 080-43344376 ◆ E-mail : info@kstdc.co ◆ Website : www.kstdc.co

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
KARNATAKA STATE TOURISM DEVELOPMENT CORPORATION LTD.
(ಕರ್ನಾಟಕ ಸರ್ಕಾರದ ಒಂದು ಉದ್ಯಮ) (A Govt. of Karnataka Undertaking)

ಕಛೇರಿ : ನೆಲಮಹಡಿ, ಬಿ.ಎಂ.ಟಿ.ಸಿ. ಯಶವಂತಪುರ
ಟಿ.ಟಿ.ಎಂ.ಸಿ. - ಬಸ್ ನಿಲ್ದಾಣ, ಯಶವಂತಪುರ ವೃತ್ತ
ಬೆಂಗಳೂರು - 560 022.

Office : Ground Floor, B.M.T.C.
Yeshwanthpur, T.T.M.C Bus Stand
Yeshwanthpur Circle, Bangalore-560 022

ಸಂಖ್ಯೆ: ಕರಾಪ್ರಅನಿ/ಆಡಳಿತ/ವೈ.ಕ/ 260 /2023-24/575 ದಿನಾಂಕ: 18.06.2024 19

**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಇವರು ಹೊರಡಿಸಿದ ನಡವಳಿಗಳು**

ವಿಷಯ: ಶ್ರೀ ಕೆ.ವೆಂಕಟೇಶ, ಸಹಾಯಕ ಉಗ್ರಾಣಿಕ(ಖಾಯಂ), ಮಯೂರ ಬಾಲ ಭವನ ಕಿಯೋಸ್ಕ ಇವರನ್ನು ಅಮಾನತ್ತುಗೊಳಿಸುವ ಕುರಿತು.

******

**ಪ್ರಸ್ತಾವನೆ:** ಶ್ರೀ ಕೆ.ವೆಂಕಟೇಶ, ಸಹಾಯಕ ಉಗ್ರಾಣಿಕ(ಖಾಯಂ) ಮಯೂರ ಬಾಲ ಭವನ ಕಿಯೋಸ್ಕ ಆದ ತಾವು ಘಟಕದ ವ್ಯವಹಾರದಲ್ಲಿ ನಿಗಮದ ಹಣವನ್ನು ನಿಗಮದ ಕ್ಯೂ ಆರ್ ಕೊಡ್ ಬಳಸದೆ ತಮ್ಮ ವೈಯಕ್ತಿಕ ಕ್ಯೂ ಆರ್ ಕೊಡ್ ಅನ್ನು ಬಳಸಿ UPI ಮೂಲಕ ದಿನಾಂಕ: 14.05.2023 ರಿಂದ 21.05.2024 ರ ವರೆಗೆ ರೂ 48,642/- ಗಳ ಹಣ ದುರುಪಯೋಗ ಮಾಡಿಕೊಂಡಿರುವುದು ತಾವು ನೀಡಿರುವ ತಮ್ಮ ಬ್ಯಾಂಕ್ ಖಾತೆಯ ವಿವರಗಳ ಪರಿಶೀಲನೆಯಿಂದ ಈ ಕೆಳಸಹಿದಾರನಾದ ನನ್ನ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ, ತಾವು ನಿಗಮದ ಒಬ್ಬ ಜವಾಬ್ದಾರಿಯುತ ನೌಕರರಾಗಿದ್ದು, ತಾವು ನಿರ್ವಹಿಸಬೇಕಾದ ಕಾರ್ಯ ವಿಧಾನವನ್ನು ಅನುಸರಿಸದೆ ಈ ರೀತಿ ನಿಗಮದ ಹಣವನ್ನು ದುರ್ಬಳಕೆ ಮಾಡಿಕೊಂಡು ಆರ್ಥಿಕ ನಷ್ಟವನ್ನೂಂಟು ಮಾಡಿ ತಮ್ಮ ಕರ್ತವ್ಯದಲ್ಲಿ ದುರುದ್ದೇಶ ಹಾಗೂ ಬೇಜವಾಬ್ದಾರಿತನವನ್ನು ತೋರಿರುತ್ತೀರಿ ಆದ್ದರಿಂದ ಕರ್ನಾಟಕ ನಾಗರಿಕ ಸೇವಾ ನಿಯಮಗಳು 97(i) (iv) ರ ರನ್ವಯ ತಮ್ಮ ಮೇಲೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ತಮ್ಮನ್ನು ನಿಗಮದ ಸೇವೆಯಿಂದ ಅಮಾನತ್ತಿನಲ್ಲಿಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**:: ಆದೇಶ ::**

ಮೇಲಿನ ಪ್ರಸ್ತಾವನೆಯನುಸಾರ ಜಗದೀಶ.ಜಿ., ಭಾ.ಆ.ಸೇ, ವ್ಯವಸ್ಥಾಪಕ ನಿರ್ದೇಶಕರು/ಶಿಸ್ತು ಪ್ರಾಧಿಕಾರಿ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಆದ ನಾನು ನಿಗಮದ ಶಿಸ್ತು ಮತ್ತು ನಡತೆ ನಿಯಮಾವಳಿ 1982 ರ ನಿಯಮ 21(1) (ಎ) ಮತ್ತು (ಐ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ.ವೆಂಕಟೇಶ, ಸಹಾಯಕ ಉಗ್ರಾಣಿಕ (ಖಾಯಂ) ಮಯೂರ ಬಾಲ ಭವನ ಕಿಯೋಸ್ಕ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ವಿಚಾರಣೆಯನ್ನು ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಸದರಿಯವರನ್ನು ನಿಗಮದ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

(ಜಗದೀಶ ಜಿ., ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿ

**ಇವರಿಗೆ,**
ಶ್ರೀ ಕೆ.ವೆಂಕಟೇಶ,
ಸಹಾಯಕ ಉಗ್ರಾಣಿಕ( ಖಾಯಂ)
ಮಯೂರ ಬಾಲ ಭವನ ಕಿಯೋಸ್ಕ

**ಪ್ರತಿ**

1. ಅ.ಆ.ಶಾಖೆ 2.ವ್ಯ.ನಿ.ಆ.ಸ 2. ಪ್ರ.ವ್ಯ(ಆ) 3. ಪ್ರ.ವ್ಯ.(ಹ) 4. ವೇತನ ವಿಭಾಗ 5. ಸಂಬಂಧಪಟ್ಟ ಘಟಕದ ವ್ಯವಸ್ಥಾಪಕರಿಗೆ 6. ಕಛೇರಿ ಪ್ರತಿ.

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
KARNATAKA STATE TOURISM DEVELOPMENT CORPORATION LTD.
(ಕರ್ನಾಟಕ ಸರ್ಕಾರದ ಒಂದು ಉದ್ಯಮ) (A Govt. of Karnataka Undertaking)

ಕಛೇರಿ : ನೆಲಮಹಡಿ, ಬಿ.ಎಂ.ಟಿ.ಸಿ. ಯಶವಂತಪುರ
ಟಿ.ಟಿ.ಎಂ.ಸಿ. - ಬಸ್ ನಿಲ್ದಾಣ, ಯಶವಂತಪುರ ವೃತ್ತ
ಬೆಂಗಳೂರು - 560 022.

Office : Ground Floor, B.M.T.C.
Yeshwanthpur, T.T.M.C Bus Stand
Yeshwanthpur Circle, Bangalore-560 022

ಕರಾಪ್ರಅನಿ/ಆಡಳಿತ/ವೈ/2022-23 | 573

ದಿನಾಂಕ:18.06.2024
19

## ಅಧಿಕೃತ ಜ್ಞಾಪನ ಪತ್ರ

ವಿಷಯ: ಶ್ರೀ ಅಬ್ದುಲ್ ವಾಜೀದ್, ವಾಹನ ಚಾಲಕರು (ಗುತ್ತಿಗೆ), ಇವರ ಗುತ್ತಿಗೆ ಸೇವೆಯಿಂದ ವಜಾಗೊಳಿಸುವ ಕುರಿತು.

ಉಲ್ಲೇಖ: 1. ಪತ್ರದ ಸಂಖ್ಯೆ: ಕರಾಪ್ರಅನಿ/ಆಡಳಿತ/42/2022-23/82/2024 ದಿನಾಂಕ:18.04.2024
2. ತಮ್ಮ ಪತ್ರದ ದಿನಾಂಕ: 20.04.2024

*****

**ಪ್ರಸ್ತಾವನೆ:**

ಶ್ರೀ ಅಬ್ದುಲ್ ವಾಜೀದ್ , ವಾಹನ ಚಾಲಕರು (ಗುತ್ತಿಗೆ), ಮಯೂರ ಬಾಲ ಭವನ ಕಿಯೋಸ್ಕ ಆದ ನಿಮ್ಮನ್ನು ಉಲ್ಲೇಖ(1) ರ ಆದೇಶದಂತೆ "ವಾಹನ ಚಾಲಕರು" (ಗುತ್ತಿಗೆ) ಹುದ್ದೆಗೆ ದಿನಾಂಕ:02.04.2024 ರಿಂದ ಅನ್ವಯವಾಗುವಂತೆ ಒಂದು ವರ್ಷದ ಅವಧಿಗೆ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುತ್ತದೆ. ಸದರಿ ಷರತ್ತು ಮತ್ತು ನಿಯಮಾವಳಿಗೆ ಬದ್ಧರಾಗಿ, ನೀವು ನಿಗಮದಲ್ಲಿ ಒಪ್ಪಂದ ಮಾಡಿಕೊಂಡಿರುತ್ತೀರಿ.

ಆದರೆ ತಾವು, ಮಯೂರ ಬಾಲ ಭವನ ಕಿಯೋಸ್ಕ್ ನಲ್ಲಿ ನಿಗಮದ ಕ್ಯೂ ಆರ್ ಕೊಡ್ ಅನ್ನು ಬಳಸದೆ ತಮ್ಮ ವೈಯಕ್ತಿಕ ಕ್ಯೂ ಆರ್ ಕೋಡ್ ಬಳಸಿ ತಮ್ಮ ವೈಯಕ್ತಿಕ ಖಾತೆಗೆ ರೂ.2,66,215/- ಗಳನ್ನು UPI ಮುಖಾಂತರ ಪಡೆದಿರುವುದು ತಾವು ಸಲ್ಲಿಸಿರುವ ತಮ್ಮ ಬ್ಯಾಂಕ್ ಖಾತೆಯ statement ನಿಂದ ಹಾಗೂ ತಾವು ಹಣ ದುರುಪಯೋಗ ಮಾಡಿಕೊಂಡಿರುವುದಾಗಿ ಒಪ್ಪಿಕೊಂಡಿರುವ ಉಲ್ಲೇಖ (2)ರ ಪತ್ರದಿಂದ ಕಂಡುಬಂದಿರುತ್ತದೆ. ಇದು ನಿಗಮದ ಗುತ್ತಿಗೆ ನೇಮಕಾತಿ ಷರತ್ತು ಮತ್ತು ನಿಯಮಗಳ ಕ್ರ.ಸಂ 16 ರ ವಿರುದ್ಧವಾಗಿದ್ದು, ಇದರನ್ವಯ ನಿಗಮಕ್ಕೆ ನಿಮ್ಮ ಸೇವೆಯ ಅವಶ್ಯಕತೆ ಇಲ್ಲವೆಂದು ಪರಿಗಣಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ**

ಮೇಲ್ಕಂಡ ಪ್ರಸ್ತಾವನೆಯನುಸಾರ, ಶ್ರೀ ಅಬ್ದುಲ್ ವಾಜೀದ್ , ವಾಹನ ಚಾಲಕರು ( ಗುತ್ತಿಗೆ), ಮಯೂರ ಬಾಲ ಭವನ ಕಿಯೋಸ್ಕ ತಮ್ಮೊಂದಿಗೆ ಮಾಡಿಕೊಂಡ ಕರಾರು ಒಪ್ಪಂದವನ್ನು ಉಲ್ಲೇಖಿತ ಆದೇಶದ ಕ್ರಮ ಸಂಖ್ಯೆ: ನಿಯಮ 16 ರ ಷರತ್ತಿನನ್ವಯ ತಮ್ಮ ಕರಾರು ಒಪ್ಪಂದವನ್ನು ರದ್ದುಗೊಳಿಸಿ , ತಮ್ಮನ್ನು ಗುತ್ತಿಗೆ ಸೇವೆಯಿಂದ ಈ ಕೂಡಲೇ ವಜಾಗೊಳಿಸಲಾಗಿದೆ .

ವ್ಯವಸ್ಥಾಪಕ ನಿರ್ದೇಶಕರು

**ಗೆ,**
ಶ್ರೀ ಅಬ್ದುಲ್ ವಾಜೀದ್,
ವಾಹನ ಚಾಲಕ (ಗುತ್ತಿಗೆ),
ಮಯೂರ ಬಾಲ ಭವನ
ಕಿಯೋಸ್ಕ

ಪ್ರತಿ: 1.ವ್ಯ.ನಿ.ಆ.ಸ 2. ಪ್ರ.ವ್ಯ.(ಹ) 3.ಪ್ರ.ವ್ಯ(ಸಾ) 4. ಕಛೇರಿ ಪ್ರತಿ

ದೂರವಾಣಿ Phone : 080-43344334 ❖ ಫ್ಯಾಕ್ಸ್ Fax : 080-43344376 ❖ E-mail : info@kstdc.co ❖ Website : www.kstdc.co

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ
KARNATAKA STATE TOURISM DEVELOPMENT CORPORATION LTD.
(ಕರ್ನಾಟಕ ಸರ್ಕಾರದ ಒಂದು ಉದ್ಯಮ) (A Govt. of Karnataka Undertaking)

ಕಛೇರಿ : ನೆಲಮಹಡಿ, ಬಿ.ಎಂ.ಟಿ.ಸಿ. ಯಶವಂತಪುರ
ಟಿ.ಟಿ.ಎಂ.ಸಿ. - ಬಸ್ ನಿಲ್ದಾಣ, ಯಶವಂತಪುರ ವೃತ್ತ
ಬೆಂಗಳೂರು - 560 022.

Office : Ground Floor, B.M.T.C.
Yeshwanthpur, T.T.M.C Bus Stand
Yeshwanthpur Circle, Bangalore-560 022

ಸಂಖ್ಯೆ: ಕರಾಪ್ರಅನಿ/ಆಡಳಿತ/ವ್ಯ.ಕ/ 37 /2024-25 | 576 ದಿನಾಂಕ: 18.06.2024 19

**ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮಅಭಿವೃದ್ಧಿ ನಿಗಮ ಇವರು ಹೊರಡಿಸಿದ ನಡವಳಿಗಳು**

ವಿಷಯ: ಶ್ರೀ ಕೆ.ಕೊದಂಡರಾಮು, ಸಹಾಯಕ ಪರಿಚಾರಕರು (ಖಾಯಂ) ಮಯೂರ ಬಾಲ ಭವನ ಕಿಯೋಸ್ಕ ಇವರನ್ನು ಅಮಾನತ್ತುಗೊಳಿಸುವ ಕುರಿತು.

******

**ಪ್ರಸ್ತಾವನೆ:** ಶ್ರೀ ಕೆ.ಕೊದಂಡರಾಮು, ಸಹಾಯಕ ಪರಿಚಾರಕರು (ಖಾಯಂ) ಮಯೂರ ಬಾಲ ಭವನ ಕಿಯೋಸ್ಕ ಆದ ತಾವು ಘಟಕದ ವ್ಯವಹಾರದಲ್ಲಿ ನಿಗಮದ ಹಣವನ್ನು ನಿಗಮದ ಕ್ಯೂ ಆರ್ ಕೊಡ್ ಬಳಸದೆ ತಮ್ಮ ವೈಯಕ್ತಿಕ ಕ್ಯೂ ಆರ್ ಕೊಡ್ ಅನ್ನು ಬಳಸಿ UPI ಮೂಲಕ ದಿನಾಂಕ: 24.11.2023 ರಿಂದ 23.05.2024 ರ ವರೆಗೆ ರೂ 3,920/-ಗಳ ಹಣ ದುರುಪಯೋಗ ಮಾಡಿಕೊಂಡಿರುವುದು ತಾವು ನೀಡಿರುವ ತಮ್ಮ ಬ್ಯಾಂಕ್ ಖಾತೆಯ ವಿವರಗಳ ಪರಿಶೀಲನೆಯಿಂದ ಈ ಕೆಳಸಹಿದಾರನಾದ ನನ್ನ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ, ತಾವು ನಿಗಮದ ಒಬ್ಬ ಜವಾಬ್ದಾರಿಯುತ ನೌಕರರಾಗಿದ್ದು, ತಾವು ನಿರ್ವಹಿಸಬೇಕಾದ ಕಾರ್ಯ ವಿಧಾನವನ್ನು ಅನುಸರಿಸದೆ ಈ ರೀತಿ ನಿಗಮದ ಹಣವನ್ನು ದುರ್ಬಳಕೆ ಮಾಡಿಕೊಂಡು ಆರ್ಥಿಕ ನಷ್ಟವನ್ನೂಂಟು ಮಾಡಿ ತಮ್ಮ ಕರ್ತವ್ಯದಲ್ಲಿನ ದುರುದ್ದೇಶ ಹಾಗೂ ಬೇಜವಾಬ್ದಾರಿತನವನ್ನು ತೋರಿರುತ್ತೀರಿ ಆದ್ದರಿಂದ ಕರ್ನಾಟಕ ನಾಗರಿಕ ಸೇವಾ ನಿಯಮಗಳು 97(i) (iv) ರ ರನ್ವಯ ತಮ್ಮ ಮೇಲೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ತಮ್ಮನ್ನು ನಿಗಮದ ಸೇವೆಯಿಂದ ಅಮಾನತ್ತಿನಲ್ಲಿಡಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

**:: ಆದೇಶ ::**

ಮೇಲಿನ ಪ್ರಸ್ತಾವನೆಯನುಸಾರ ಜಗದೀಶ.ಜಿ., ಭಾ.ಆ.ಸೇ, ವ್ಯವಸ್ಥಾಪಕ ನಿರ್ದೇಶಕರು/ಶಿಸ್ತು ಪ್ರಾಧಿಕಾರಿ, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಆದ ನಾನು ನಿಗಮದ ಶಿಸ್ತು ಮತ್ತು ನಡತೆ ನಿಯಮಾವಳಿ 1982 ರ ನಿಯಮ 21(1) (ಎ) ಮತ್ತು (ಐ) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಕೆ.ಕೊದಂಡರಾಮು, ಸಹಾಯಕ ಪರಿಚಾರಕರು (ಖಾಯಂ) ಮಯೂರ ಬಾಲ ಭವನ ಕಿಯೋಸ್ಕ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದ ವಿಚಾರಣೆಯನ್ನು ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ಸದರಿಯವರನ್ನು ನಿಗಮದ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

(ಜಗದೀಶ ಜಿ, ಭಾ.ಆ.ಸೇ)
ವ್ಯವಸ್ಥಾಪಕ ನಿರ್ದೇಶಕರು ಹಾಗೂ ಶಿಸ್ತು ಪ್ರಾಧಿಕಾರಿ

**ಇವರಿಗೆ,**
ಶ್ರೀ ಕೆ.ಕೊದಂಡರಾಮು,
ಸಹಾಯಕ ಪರಿಚಾರಕರು (ಖಾಯಂ),
ಮಯೂರ ಬಾಲ ಭವನ ಕಿಯೋಸ್ಕ

**ಪ್ರತಿ**

1. ಅ.ಆ.ಶಾಖೆ 2.ವ್ಯ.ನಿ.ಆ.ಸ 2. ಪ್ರ.ವ್ಯ(ಆ) 3. ಪ್ರ.ವ್ಯ.(ಹ) 4. ವೇತನ ವಿಭಾಗ 5. ಸಂಬಂಧಪಟ್ಟ ಘಟಕದ ವ್ಯವಸ್ಥಾಪಕರಿಗೆ 6. ಕಛೇರಿ ಪ್ರತಿ.

ದೂರವಾಣಿ Phone : 080-43344334 ◆ ಫ್ಯಾಕ್ಸ್ Fax : 080-43344376 ◆ E-mail : info@kstdc.co ◆ Website : www.kstdc.co